## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.

ಅಪರಾಧ ಸಂಖ್ಯೆ: 297/2016

ಪಿಡಬ್ಲ್ಯೂ: 06 ಸಿಡಬ್ಲ್ಯೂ : 03
ದಿನಾಂಕ: 20.09.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ರವಿ ಮಾಚಕನವರ |
| ತಂದೆ/ಗಂಡನ ಹೆಸರು | - ಬಸಪ್ಪ |
| ವಯಸ್ಸು | - 51 ವರ್ಷ |
| ಉದ್ಯೋಗ | - ಗ್ರಾಮ ಲೆಕ್ಕಾದಿಕಾರಿ ಸವಣೂರ |
| ವಾಸ ಸ್ಥಳ | - ಸವಣೂರ |

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ.

ನಾನು ಕಳೆದ 16 ವರ್ಷದಿಂದ ಸವಣೂರಿನ ಗ್ರಾಮ ಲೆಕ್ಕಾದಿಕಾರಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-2 ರವರ ಪರಿಚಯ ಇದೆ. ಜಿಲ್ಲಾ ಆರೋಗ್ಯ ಅಧಿಕಾರಿಗಳು ದಿನಾಂಕ: 09.07.2015 ರಂದು ಸವಣೂರಿಗೆ ಬಂದಿದ್ದರು. ನಾನು, ಚಾಸಾ-1, ತಾಲೂಕಾ ಆರೋಗ್ಯ ಇಲಾಖೆ ಅಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಸವಣೂರು, ಆರೋಗ್ಯ ಇಲಾಖೆಯ ಸಿಬ್ಬಂದಿಯವರು, ಸಲೀಂಅಹಮ್ಮದ ಇವರ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ಆರೋಪಿ ಸಲೀಂ ಅಹಮ್ಮದ ಬನ್ನೂರು ಇತ ನಕಲಿ ವೈದ್ಯ ಅಂತಾ ಕಂಡು ಬಂದಿರುತ್ತದೆ. ಸದರಿ ಚಾಸಾ-1, 4,5 ರವರು ಪರಿಶೀಲನೆ ಮಾಡಿ ಆಸ್ಪತ್ರೆಯನ್ನು ಶೀಲು ಮಾಡಿದರು. ನಮ್ಮ ಸಮಕ್ಷಮ ವೈದ್ಯಕೀಯ ಸಾಮಗ್ರಿಗಳನ್ನು ಶೀಲು ಮಾಡಿ ಸಹಿ ಪಡೆದಿರುತ್ತಾರೆ. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು.ನನ್ನ ಸಮಕ್ಷಮ ಜಪ್ತ ಮಾಡಿದ ಸಾಮಗ್ರಿಗಳು ಈಗ ನ್ಯಾಯಾಲಯದ ಮುಂದೆ ಇರುತ್ತವೆ. ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 48 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು 11.30 ರಿಂದ 4.30 ರವರೆಗೆ ಮಾಡಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ</u>

ನಾವು ಆರೋಪಿಯ ಆಸ್ಪತ್ರೆಗೆ ಹೋಗುವ ಮೊದಲು ನಮ್ಮ ಕಚೇರಿ ಹತ್ತಿರ ಕೂಡಿದ್ದೆವು. ಸಾಕ್ಷಿ ಮುಂದುವರೆದು ನನ್ನನ್ನು ಫೋನ್ ಮೂಲಕ ಎ. ಸಿ ಕಚೇರಿಗೆ ಕರೆಸಿದ್ದರು. ಎ.ಸಿ ಕಚೇರಿ ಹತ್ತಿರ ಡಿ ಎಚ್ ಓ, ಟಿ ಎಚ್ ಓ ಎಲ್ಲರೂ ಇದ್ದರು ಎಂದರೆ ಸರಿ. ನನಗೆ ಅಲ್ಲಿ ಹೋದ ನಂತರವೇ ವಿಷಯ ತಿಳಿಸಿದರು ಎಂದರೆ ಸರಿ. ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯಲ್ಲಿ ಡಾಃ ಸವಿತಾ ಮರಡಿ ಚಾಸಾ-9 ಅವರು ಇದ್ದರು ಎಂದರೆ ಸರಿ. ನಾವು ಆಸ್ಪತ್ರೆಗೆ ಹೋದಾಗ ಡಾಃಸವಿತಾ ಮರಡಿ ಅವರು ಚಿಕಿತ್ಸೆ ಮಾಡುತ್ತಿದ್ದರು ಎಂದರೆ ನಾನು ಒಳಗಡೆ ಹೋಗಿಲ್ಲ, ನಾನು ಹೊರಗಡೆ ನಿಂತಿದ್ದೆ. ಆರೋಪಿ ಏನು ಮಾಡುತ್ತಿದ್ದ ಎಂದರೆ ಚಾಸಾ-1,4,5 ರವರು ಆರೋಪಿಯನ್ನು ವಿಚಾರಿಸುತ್ತಿದ್ದರು ಮತ್ತು ಚಾಸಾ-9 ರವರನ್ನು ವಿಚಾರಿಸುತ್ತಿದ್ದರು. ನಾನು ಆಸ್ಪತ್ರೆಯಲ್ಲಿ ಇಂಕ್ ಪ್ಯಾಡ್ ಇದ್ದದ್ದನ್ನು ನಾನು ನೊಡಿಲ್ಲ. ಇಂಕ್ ಪ್ಯಾಡ್ ಆಸ್ಪತ್ರೆಯಲ್ಲಿ ಇರುವುದು ನನ್ನ ಗಮನಕ್ಕೆ ಬಂದಿಲ್ಲ. ನಾನು ಇಂಕ್ ಪ್ಯಾಡ್ ಅಲ್ಲಿಗೆ ಒಯ್ಯದಿರಲಿಲ್ಲ ಎಂದರೆ ಆರೋಗ್ಯ ಇಲಾಖೆಯವರು ತಂದಿದ್ದರು. ನಾನು ಅಲ್ಲಿಗೆ ಹೋದ ನಂತರ ಅವರು ಇಂಕ್ ಪ್ಯಾಡ್ ಇಂದಿರುತ್ತಾರೆ ಅಂತಾ ನನಗೆ ಗೊತ್ತಾಯಿತು. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಅಂತಾ ನನಗೆ ಗೊತ್ತಿದೆ. ಅದನ್ನು ನನ್ನ ಸಮಕ್ಷಮ ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ಡಾಃ ಘಾಟಗೆಯವರು ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ಕನ್ನಡದಲ್ಲಿ ಬರೆದಿರುತ್ತಾರೆ, ಕೆಲವೊಂದು ಶಬ್ದಗಳನ್ನು ಇಂಗ್ಲೀಷನಲ್ಲಿ ಬರೆದಿರುತ್ತಾರೆ. ಇಂಗ್ಲೀಷನಲ್ಲಿ ಮೆಡಿಸಿನಗಳನ್ನು ಬರೆದಿರುತ್ತಾರೆ. ಸಾಮಾನ್ಯವಾಗಿ ಸಹಿಗಳನ್ನು ಕೆಳಗೆ ಮಾಡುತ್ತೇವೆ. ನಾನು ಪಂಚನಾಮೆಗೆ ಪ್ರತಿ ಪುಟಕ್ಕೆ ಸಾಕ್ಷಿ ಅಂತಾ ಸಹಿ ಮಾಡಿದ್ದೇನೆ, ಕೊನೆಯ ಪುಟಕ್ಕೆ ಎರಡು ಸಲ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪಂಚನಾಮೆ ಮಾಡದೇ ಮೊದಲು ಖಾಲಿ ಹಾಳೆಯಲ್ಲಿ, ನಂತರ ಮತ್ತೊಂದು ಸಲ ಬರೆದ ಹಾಳೆಯಲ್ಲಿ ಸಹಿ ಪಡೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಆದೇಶದಂತೆ ನಾವು ಕೆಲಸ ಮಾಡುತ್ತೇವೆ ಎಂದರೆ ಸರಿ. ನಾನು ಸಹಿ ಮಾಡಿದ ನಂತರ ದಿನಾಂಕ ಬರೆಯುತ್ತೇನೆ ಎಂದರೆ ಸರಿ. ನಿಪಿ-1 ರಲ್ಲಿ ಸಹಿ ಮಾಡಿದ ನಂತರ ದಿನಾಂಕ ಬರೆದಿಲ್ಲ ಎಂದರೆ ಸರಿ, ಮೇಲೆ ದಿನಾಂಕ ಇದ್ದದ್ದರಿಂದ ದಿನಾಂಕ ಬರೆದಿಲ್ಲ. ನಾನು ಶೀಲು ಹಾಕುವಾಗ ಬರೆದಿರುವ ಅಕ್ಷರ ಬಿಟ್ಟು ಹಾಕುತ್ತೇನೆ ಎಂದರೆ ಸರಿ. ಈಗ ನಾನು ನೋಡುತ್ತಿರುವ ದಾಖಲೆ ಪಂಚನಾಮೆಯೊಂದಿಗೆ ಇರುವ ದಾಖಲೆಯಾಗಿರುತ್ತದೆ. ಅದು ಪಂಚನಾಮೆಯ ಭಾಗ ಆಗಿರುತ್ತದೆ, ಸದರಿ ದಾಖಲೆಯ ಮೇಲೆ ಅಕ್ಷರಗಳ ಮೇಲೆ ಶೀಲು ಹೊಡೆದಿರುತ್ತೇನೆ ಎಂದರೆ ಸರಿ. ಬರೆದ ನಂತರ ಶೀಲು ಹಾಕಿರುತ್ತೇವೆ. ಸದರಿ ದಾಖಲೆಯಲ್ಲಿ ಮೆಡಿಸಿನಗಳ ಹೆಸರುಗಳನ್ನು ಬರೆದಿರುತ್ತಾರೆ.

ಅದನ್ನು ಸಹ ಡಾಕ್ಟರವರೇ ಬರೆದಿರುತ್ತಾರೆ, ಯಾರು ಅಂತಾ ಹೆಸರು ಹೇಳಲು ಬರುವುದಿಲ್ಲ. ನಾನು ಅದನ್ನು ಓದಿಲ್ಲ. ಮೆಡಿಸಿನಗಳನ್ನು ನೋಡಿ ಸದರಿ ಲಿಸ್ಟ ತಯಾರಿಸಿರುತ್ತಾರೆ. ಔಷಧಿಗಳನ್ನು ಹೊರತುಪಡಿಸಿ ದುಡ್ಡು ಜಪ್ತಪಡಿಸಿಕೊಂಡಿಲ್ಲ. ನಾನು 11.30 ರಿಂದ 4.30 ರವರೆಗೆ ಆ ದಿನ ಆರೋಪಿಯ ಆಸ್ಪತ್ರೆಯಲ್ಲಿದ್ದೆ ಎಂದರೆ ಸರಿ. ನಾನು ನನ್ನ ಕಚೇರಿಯಲ್ಲಿ ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ ಎಂದರೆ ಆದಿನ ಬೆಳಿಗ್ಗೆ ಸಹಿ ಮಾಡಿರಬಹುದು. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.